ಹತ್ತಿರದಲ್ಲೆಲ್ಲೂ ಸಿಗಲಿಲ್ಲ ಎಂದು ಸುಮ್ಮನೆ ಹಿಂದಿರುಗಬೇಕಿತ್ತು. ಅದಾವುದೋ ದೇವಲೋಕದ ಹೂವಿರಬೇಕು. ಗಂಧರ್ವರು ಜಲಕ್ರೀಡೆಗೋ, ವನವಿಹಾರಕ್ಕೋ ಬಂದು ಹಿಂದಿರುಗುವಾಗ ಇಲ್ಲಿ ಬಿದ್ದಿರಬಹುದು. ಭೂಲೋಕದ ಹೂವಾಗಿದ್ದರೆ, ಇಷ್ಟರಲ್ಲಿ ಭೂಮಿ–ಪಾತಾಳ ಎಲ್ಲಿದ್ದರೂ ನನಗಾಗಿ ಹುಡುಕಿ ತರುತ್ತಿರಲಿಲ್ಲವೇ?' ಹೀಗೆ ಮನದಲ್ಲಿ ಕಳವಳಪಟ್ಟುಕೊಂಡರೂ ಆ ತಳೋದರಿ ತೋರುಗಾಣಿಕೆಗೆ ದೃಢವಾದ ಹೆಜ್ಜೆಯಿಟ್ಟು ನಡೆಯತೊಡಗಿದಳು.

'ಪಾಪ, ಸುಂದರಿ ಭಯ ಪಟ್ಟಿರಬಹುದು. ನಾನೀಗ ಮುಂದೆ ಹೋಗಿ ಪ್ರಕಟವಾಗಲೇ? ನನ್ನನ್ನು ಕಂಡು, ನೀ ಯಾರು? ಎಂದು ಕೇಳಿದರೆ ಏನು ಹೇಳಲಿ? ಹೇಳಿದರೆ ನಂಬುವಳೇ? ಅನುಮಾನಿಸುವಳೇ ಅಥವಾ ಅವಮಾನಿಸುವಳೇ? ನನ್ನ ಬದುಕಿನ ಕುರಿತು ಹೇಗೆ ಪ್ರತಿಕ್ರಿಯಿಸಬಹುದು! ಜುಗುಪ್ಸೆಪಟ್ಟು ಇದೆಂತಹ ಹೀನ ಬದುಕು ಬದುಕುತ್ತಿದ್ದೀಯೆ ಎಂದಾಳೆ? ಹಾಗೇಕೆ ಎನ್ನುವಳು! ನಾನು ಸಹ ರಾಮ ಏಕಪತ್ನೀವ್ರತಸ್ಥ ಆಗಿರುವಂತೆ, ಏಕಪತ್ನೀವ್ರತಸ್ಥೆಯಾಗಿ ಬದುಕು ಸವೆಸುತ್ತಿಲ್ಲವೇ? ಅಪ್ಪನ ವಾತ್ಸಲ್ಯ ಅರಿಯದ ಕಂದನನ್ನು ಅಮ್ಮನಾಗಿಯೂ ಅಪ್ಪನಾಗಿಯೂ ಸಲಹುತ್ತಿಲ್ಲವೇ? ನನ್ನ ಘನತೆಯ ಬದುಕಿನ ಬಗೆಯನು ಅರಿತು ಈಕೆಯೂ ಹಿರಿದು ಹೆಮ್ಮೆ ಪಡದಿಹಳೇ? ಭೀಮ ಬರುವವರೆಗೆ ಕಾದು, ಅವರಿಗೆ ನನ್ನನ್ನು ತೋರಿ, ಇಂಥಾ ಹೆಣ್ಣನ್ನು ಬಿಡುವುದು ಏಕೆ? ಇವಳು ನಮ್ಮೊಡನಿರಲಿ ಎಂದು ಹೇಳದಿಹಳೇ? ಸವತಿ ಮತ್ಸರ ತೋರದೇ, ಬಾ ನಗರಕ್ಕೆ ನಮ್ಮೊಡನೆ ಎಂದು ಕರೆಯದೇ ಇದ್ದಾಳೇ? ಹಾ ಹಾಗೆ ಕರೆದರೆ ಹೋಗಿಬಿಡಲೇ! ಹೋಗಿ? ಆಮೇಲೆ! ಅಲ್ಲಿ ರಾಣಿಯರಿಗೆಲ್ಲಾ ಒಂದು ಅಂತಃಪುರ ಎಂಬ ಅರಮನೆ ಇರುವುದಂತೆ. ನನ್ನನ್ನೂ 'ರಾಣಿ' ಎಂದು ಕರೆದು ಗೌರವಿಸಿ ಆ ಅಂತಃಪುರದ ಒಳಗೆ ಬಿಟ್ಟಾರು. ಬಿಡುವರೆ? ಬಿಡರೆ! ಭೀಮಸೇನರ ಮೊದಲ ಮಡದಿಯ ಅಂತಃಪುರ ಪ್ರವೇಶ ತಡೆಯುವ ಧೈರ್ಯ ಯಾರಿಗುಂಟು?! ಅಲ್ಲವೇ ಅಲ್ಲಿ ಭೀಮಸೇನರು ದ್ರೌಪದಿಯೊಡನೆ ಇರುವಾಗ ನಾನೇನು ಮಾಡುತ್ತಿರಲಿ? ಅಥವಾ ಅವರೇ ನನ್ನೊಡನಿರುವಾಗ ಈಕೆ ಏನು ಮಾಡುವಳು?! ಅರೆ, ಈಕೆಗೇನು ಕೊರೆ! ಐವರೂ ಪಾಂಡುಪುತ್ರರನು ವರಿಸಿದ್ದಾಳಂತಲ್ಲ! ನಾನು ಭೀಮಸೇನರ ಒಡನಿರುವಾಗ ಮತ್ತೊಬ್ಬರ ಜೊತೆ ಈಕೆ!' — ತನ್ನ ಯೋಚನಾ ಲಹರಿಗೆ ನಗು ಬಂದರೂ 'ಅಟ್ಟಹಾಸಗೈದರೆ ಇನ್ನಿಲ್ಲದಂತೆ ಬೆದರಿಯಾಳು' ಎಂದು ನಗುವನ್ನು ಕಷ್ಟಪಟ್ಟು ನುಂಗಿ, ದ್ರುಪದನಂದನೆಯ ಚಂಚಲ ಕಣ್ಣಿಗೆ ಬೀಳದಂತೆ ಜಾಗ್ರತೆ ವಹಿಸಿ ಮತ್ತಷ್ಟು ಮರೆ ಅರಸಿಕೊಂಡು ಮೆಲ್ಲಗೆ ಸರಿದು ನಿಂತಳು.

'ಇದು ಮತ್ತೆ ಕೌರವರ ಸಂಚಾಗಿದ್ದರೆ? ಅಥವಾ ಭೀಮಸೇನರೇ ನನ್ನನ್ನು ಮೊದಲಿಗೆ ಹೆದರಿಸಿ ಅನಂತರ, ಎಂಥಾ ಪುಕ್ಕಲು ನೀನು' ಎಂದು ಹಾಸ್ಯ ಮಾಡಲು ಹೀಗೆ ಕಣ್ಣಾರೆಯಾಟ ಆಡುತ್ತಿದ್ದಾರೆಯೇ? ಇರಬಹುದು. ಏಕೆಂದರೆ, ಕಾಡಿಸುವುದರಲ್ಲಿ ಇತರೆ ಪಾಂಡವರಿಗಿಂತ ಇವರದ್ದೇ ಒಂದು ಕೈ ಮೇಲು. ಕಾಡಿಸುತ್ತಲೇ ಕಾತರಿಸುವಂತೆ ಮಾಡುತ್ತಾರೆ ಆಹ್! ಅರ್ಧ ಗಳಿಗೆಯ ಹಿಂದೆ ಮುತ್ತಿನ ಮತ್ತಿನಲಿ ಮೈಮರೆತಿದ್ದಾಗ, ಅಪರೂಪದ ಸುವಾಸನೆಯ ಜಾಡು ಹಿಡಿದು ಕಣ್ಣಿಗೆ ಕಂಡ ಆ ಮೋಹಕ ಪುಷ್ಪವನ್ನು ತೋರುತ್ತಾ ಇಂಥದ್ದೇ ಹಲವು ಬೇಕೆಂದು ಕೇಳಿದ್ದಕ್ಕೆ ರಸಭಂಗವಾಗಿ ಅವರೇ ಹೀಗೆ ನನ್ನನ್ನು ಕಾಡುತ್ತಿರಬಹುದೇ?' ಏನನ್ನೋ ನೆನೆದು ದ್ರೌಪದಿಯ ಕೆನ್ನೆಗಳು ನಾಚಿ ಕೆಂಪಾದವು. ಭೀಮನ ಬಾಹುಬಂಧನ ಅಧರ ಚುಂಬನ ನೆನೆಯುತ್ತಾ ತುಟಿಗಳು ಕಂಪಿಸಿದವು. ಇರುವ ಐವರಲ್ಲಿ ರಸಿಕ, ಮೋಹಕ ಪ್ರೇಮಿ, ಉತ್ಕಟವಾಗಿ ಕೂಡುವವನೆಂದರೆ ಭೀಮನೇ... ಅವನೊಡನೆಯ ಪ್ರತೀ ಅನುಭವಕ್ಕೆ ಯಾವಾಗಲೂ ತಾಜಾತನವಿರುತ್ತದೆ. ಮದುವೆಯಾದ ಮೊದಲ ಬಾರಿಯ ಪುಳಕ, ದಣಿವರಿಯದ ಕಾತರ, ಪದೇಪದೇ ಸಂಧಿಸುವ ಆತುರ, ಈಗಲೂ ಮನಸ್ಸಿಗೆ ಚೈತನ್ಯದಾಯಕ...' ದ್ರೌಪದಿಯ ಮನದಲ್ಲಿ ಶೃಂಗಾರ ಲಹರಿ ಮುಂದುವರೆದಾಗ, ತಡೆ ಒಡ್ಡಿದಂತೆ ಆಕೆಯ ಬಲಭಾಗದ ಗಿಡಗಂಟಿಗಳ ಪೊದೆಯ ನಡುವಿನಿಂದ ದಾಪುಗಾಲಿಡುತ್ತಾ ಯಾರೋ ಓಡಿದಂತಾಯ್ತು. ಆ ದೊಡ್ಡ ಪೊದೆ ಬಹಳ ಬಿರುಸಾಗಿ ಅಲುಗುತ್ತಾ ಯಾವುದೋ ಬೃಹದಾಕಾರದ ಮೃಗವೊಂದು ಅದರೊಳಗೆ ಇತ್ತೆಂಬುದನ್ನು ಸ್ಪಷ್ಟಪಡಿಸಿತು.

ದ್ರೌಪದಿಗೆ ಈಗ ನಿಜಕ್ಕೂ ಭಯವಾಯ್ತು. 'ಮಂದಮಾರುತವು ಹೊತ್ತು ತಂದ ಈ ಒಂದು ಸೌಗಂಧಿಕಾ ಪುಷ್ಪವನ್ನು ಧರ್ಮರಾಯನಿಗೆ ಅರ್ಪಿಸುವೆ, ನನಗೆ ಮತ್ತಷ್ಟು ಪುಷ್ಪಗಳನು ತಂದುಕೊಡುವೆಯಾ ಪ್ರಿಯಾ...?' ಎಂದು ಭೀಮಸೇನನಿಗೆ ಹೇಳಿದಂತೆ ಆತ ಗಂಧಮಾದನ ಪರ್ವತದತ್ತ ಹೊರಟಾಗ ನಾನು ಧರ್ಮರಾಯರಿದ್ದ ಎಡೆಗೆ ಹೋಗಬೇಕಿತ್ತು. ಇಲ್ಲಿ ಕುಳಿತು ಭೀಮನನ್ನು ಕಾಯುವ ಮನಸ್ಸು ಏಕೆ ಮಾಡಿದೆನೋ ಎಂದು ಪಶ್ಚಾತ್ತಾಪಪಡುತ್ತಿರುವಾಗ ದ್ರೌಪದಿಯನ್ನು ದಟ್ಟ ಪರಿಮಳ ಆವರಿಸಿತು. ಕಡುಸಮ್ಮೋಹಕ ಸುವಾಸನೆ ಆಘ್ರಾಣಿಸುತ್ತಾ ಆ ರತಿಸ್ವರೂಪಿಣಿ ಭ್ರಮಾಧೀನಳಾಗಿ ಸ್ವಪ್ನಾವಸ್ಥೆಗೆ ಜಾರಿದಳು.

ನವಲತೆಯೊಂದು ಆಸರೆ ಕಳಚಿ ನೆಲಕ್ಕುರುಳುವಂತೆ, ಪ್ರಜ್ಞಾಹೀನಳಾಗಿ ಧರಾಶಾಯಿಯಾಗುತ್ತಿದ್ದ ದ್ರೌಪದಿಯನ್ನು ಬಿಗಿದಪ್ಪಿದ ಭೀಮಸೇನ ನಿಧಾನವಾಗಿ ಅವಳನ್ನು ಹೊಂಗೆ ನೆಳಲಲಿ ಹಾಸಿದ್ದ ಹುಲ್ಲು ಹಾಸಿನ ಮೇಲೆ ಮಲಗಿಸಿದ. ಭೀಮನ ಅಕ್ಕರೆಯ ಶೈತ್ಯೋಪಚಾರದಿಂದ ಚೇತರಿಸಿ ಕಣ್ಬಿಟ್ಟ ದ್ರುಪದೆ, ಅಸ್ತವ್ಯಸ್ತವಾಗಿದ್ದ ತನ್ನ ವಸ್ತ್ರಾಭರಣಗಳನ್ನು ಸರಿಪಡಿಸಿಕೊಳ್ಳುವ ಗೋಜಿಗೆ ಹೋಗದೆ, ಕಾತರಿಸಿ ತರಿಸಿಕೊಂಡ ಸೌಗಂಧಿಕಾ ಪುಷ್ಪ ರಾಶಿಯನು ನೋಡಿ ಸಂಭ್ರಮಿಸಿದಳು.

'ನನ್ನ ಸಕಲ ಬೇಡಿಕೆಗಳನು ಈಡೇರಿಸುವ ಮನೋವಲ್ಲಭ ನೀನು. ನಿನ್ನ ಕುರಿತು ಯೋಚಿಸುವಾಗ, ಆ ಸೀತಾಮಾತೆಯಂತೆ ನಿನ್ನೊಬ್ಬನಿಗೆ ಮಾತ್ರ ನಾನು ಮಡದಿಯಾಗಬೇಕಿತ್ತು ಎನಿಸುವುದು ಭೀಮಾ... ನೀನು ನನಗಾಗಿ ಇರುವಂತೆ, ನಾನೂ ನಿನಗೆ ಮೀಸಲಿರುವೆ. ಮುಂದಿನ ಜನ್ಮದಲಿ ಈ ಹೂವು ಮತ್ತದರ ಪರಿಮಳ ಒಂದರೊಳಗೊಂದು ಬೆರೆತಂತೆ ಅಗಲಲಾರದೆ ಬೆರೆತುಬಿಡುವಾ ನಾ ನಿನಗೆ ನೀ ನನಗೆ ಹೂವಾಗುವಾ, ರತಿರೂಪಿ ಭಗವತಿಗೆ ಮುಡಿಪಾಗುವ ಎಂದು ರಸಋಷಿಯೊಬ್ಬ ನಮ್ಮನ್ನು ಕಂಡು ಬರೆಯುವುದಕೆ ಮುಂದೊಮ್ಮೆ ಸ್ಫೂರ್ತಿಯಾಗುವ.'

ಅರೆ ಜಾಗ್ರತ ಅರೆ ಸ್ವಪ್ನಾವಸ್ಥೆಯಲಿ ಬಡಬಡಿಸುತ್ತಾ ದ್ರೌಪದಿ ಭೀಮಸೇನನ ಅಧರಕ್ಕೆ ತನ್ನಧರವನು ಉಡುಗೊರೆ ಕೊಟ್ಟು ಪೂರ್ಣಮತ್ತಿನಲಿ ಮೈ ಮರೆತಳು.

ನಿದ್ರಾವಶಳಾದ ದ್ರೌಪದಿಯನ್ನು ಮೆಲ್ಲಗೆ ಮಲಗಿಸಿ, ಒಂದಷ್ಟು ಸೌಗಂಧಿಕಾ ಪುಷ್ಪಗಳನು ಕೈಯಲ್ಲಿ ಹಿಡಿದು ಗಿಡಗಂಟಿಗಳ ಪೊದೆಯ ಮುಂದೆ ಪಶ್ಚಿಮ ದಿಕ್ಕಿನತ್ತ ತಿರುಗಿ ನಿಂತ ಭೀಮಸೇನ, 'ಇತ್ತ ಬಾ ಪ್ರಿಯೇ ಅಗ್ನಿಪುತ್ರಿ ಇದೀಗ ದೀರ್ಘನಿದ್ರೆಗೆ ಶರಣಾಗಿಹಳು. ನನ್ನ ಮುಂದೆ ನಿಸ್ಸಂಕೋಚದಿಂದ ಪ್ರಕಟಳಾಗು' ಎಂದು ನುಡಿದನು.

ಅವನ ಕೈಯಲ್ಲಿದ್ದ ಅಚ್ಚಬಿಳಿಯ ಸೌಗಂಧಿಕಾ ಸುಮವು ಮುಗಿಲ ರಾಗರತಿಯನು ತನ್ನೊಳಗೆ ಇಳಿಸಿಕೊಳ್ಳುತ್ತಿತ್ತು... ಕಣ್ಣಾಲಿಗಳಲಿ ಸಪ್ತಸಾಗರವನ್ನೇ ತುಂಬಿಕೊಂಡ ಆಕೆ ಪೊದೆಯ ಮರೆಯಿಂದ ಮೆಲ್ಲನೆ ಪ್ರಕಟವಾಗುವಾಗ, ಮುಂದೆ ನಡೆಯುವ ಯಾವ ಘಟನೆಯೂ ಲೋಕಕ್ಕೆ ತಿಳಿಯಬಾರದು ಎನ್ನುವ ಹುನ್ನಾರದಲಿ ಸೂರ್ಯನು ಲಗುಬಗೆಯಿಂದ ಪರ್ವತಗಳನ್ನು ಇಳಿದು ಎಲ್ಲೆಡೆ ಕತ್ತಲು ತುಂಬಿಹೋದನು.

ಪ್ರತಿಕ್ರಿಯಿಸಿ: feedback@sudha.co.in

